ಪ್ರ-72 (154)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72 ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಹೇಳಿಕೆ**

| | |
|---|---|
| **ವಿಷಯ:** | ಬೆಂಗಳೂರು ನಗರದ ಶಿವಾಜಿನಗರ ನ್ಯೂ ಬಂಬೂ ಬಜಾರ್‌ನ ಐನ್ಸ್ ರಸ್ತೆಯಲ್ಲಿ ಕಿವುಡ ಮತ್ತು ಮೂಗರ ತರಬೇತಿ ಕೇಂದ್ರವು 1986 ರಲ್ಲಿ ಪ್ರಾರಂಭವಾಗಿ ಸತತವಾಗಿ ನಡೆದುಕೊಂಡು ಬರುತ್ತಿದೆ. ಈ ಸಂಸ್ಥೆಯು 2001 ರ ಆಗಸ್ಟ್ ತಿಂಗಳಿನಲ್ಲಿ 14 ಸಿಬ್ಬಂದಿಯನ್ನು ವೇತನಾನುದಾನಕ್ಕೊಳಪಡಿಸಲಾಗಿದೆ. ಸದರಿ ಕಾಲೇಜು ಇರುವ ಸ್ಥಳದಲ್ಲಿ ಮೆಟ್ರೋ ರೈಲು ಮಾರ್ಗವು ಬರುತ್ತಿರುವ ಕಾರಣ ನೀಡಿ ಕಾಲೇಜನ್ನು 2019 ರ ನವೆಂಬರ್ ತಿಂಗಳಿನಲ್ಲಿ ಮುಚ್ಚಲಾಗಿದೆ. ಆದರೆ ಸದರಿ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿ ವರ್ಗದವರನ್ನು ಬೇರೆ ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ಸ್ಥಳ ನಿಯುಕ್ತಿಗೊಳಿಸದೇ ಬೀದಿ ಪಾಲು ಮಾಡಿರುತ್ತಾರೆ. ಸರ್ಕಾರದ ಅಧೀನದಲ್ಲಿ ನಡೆಯುತ್ತಿರುವ ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರನ್ನು ಶಿಕ್ಷಣ ಸಂಸ್ಥೆ ಮುಚ್ಚಿದ ನಂತರ ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸ್ಥಳ ನಿಯುಕ್ತಿಗೊಳಿಸಿ ವೇತನ ನೀಡಲಾಗುತ್ತಿದೆ. ಆದರೆ ಈ ಸಂಸ್ಥೆಯ ನೌಕರರಿಗೆ ಯಾವುದೇ ಬದಲಿ ವ್ಯವಸ್ಥೆ ಮಾಡದೆ 2018 ಆಗಸ್ಟ್ ತಿಂಗಳಿನಿಂದ ವೇತನವನ್ನು ನೀಡದೆ ತುಂಬಾ ತೊಂದರೆಯುಂಟಾಗಿರುವ ವಿಷಯವನ್ನು ಮಾನ್ಯ ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ. |

* * *

ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆ ದಿ ಟೆಕ್ನಿಕಲ್ ಟ್ರೇನಿಂಗ್ ಸೆಂಟರ್ ಫಾರ್ ಡೆಫ್, ನಂ28/2 ನ್ಯೂ ಬಂಬೂಬಜಾರ್, ಹೇನ್ಸ್ ರಸ್ತೆ, ಬೆಂಗಳೂರು ಸಂಸ್ಥೆಗೆ ಆಗಸ್ಟ್ 2001 ರಿಂದ ಅನ್ವಯವಾಗುವಂತೆ 14 ಸಿಬ್ಬಂದಿಯನ್ನು ವೇತನಾನುದಾನಕ್ಕೆ ಒಳಪಡಿಸಲಾಗಿದೆ.

ಸಂಸ್ಥೆಯ ಆಡಳಿತ ಮಂಡಳಿಯವರ ದಿನಾಂಕ: 26-03-2019ರ ಪತ್ರದಲ್ಲಿ ವೇತನಾನುದಾನಕ್ಕೆ ಒಳಪಟ್ಟು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರು ಕಿವುಡ ಮತ್ತು ಮೂಗ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಅಗತ್ಯವಿರುವ ತರಬೇತಿ ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವುದಿಲ್ಲವೆಂದು ಹಾಗೂ ಸಿಬ್ಬಂದಿಯವರು ಅನ್ಯ ಕರ್ತವ್ಯಗಳಲ್ಲಿ ಮತ್ತು ನಿಯಮ ಬಾಹಿರ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ತೃಪ್ತಿಕರವಾಗಿ ನಿರ್ವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ.

ಆಡಳಿತ ಮಂಡಳಿಯವರ ದಿನಾಂಕ: 05-04-2019 ರ ಪತ್ರದಲ್ಲಿ ಸಂಸ್ಥೆಯ ಅನುದಾನಿತ ಸಿಬ್ಬಂದಿಗಳು ಆಗಸ್ಟ್ 2018 ರಿಂದ ಸಂಸ್ಥೆಗೆ ಹಾಜರಾಗಿ ತರಬೇತಿಗಳನ್ನು ನೀಡುತ್ತಿಲ್ಲವೆಂದು ತಿಳಿಸಿ ಈ ಕಛೇರಿಯಿಂದ ಮಂಜೂರಾಗಿರುವ 14 ಜನ ಸಿಬ್ಬಂದಿಗಳ ವೇತನಾನುದಾನವನ್ನು ಆಗಸ್ಟ್ 2018 ರಿಂದ ಅನ್ವಯಿಸುವಂತೆ ಸರ್ಕಾರಕ್ಕೆ ಆದ್ಯರ್ಪಿಸಿರುತ್ತಾರೆ. ಆಡಳಿತ ಮಂಡಳಿಯವರ ದಿನಾಂಕ: 19-07-2019 ರ ಪತ್ರದಲ್ಲಿ ಆಗಸ್ಟ್ 2018 ರಿಂದ ಸರ್ಕಾರಕ್ಕೆ ಆದ್ಯರ್ಪಿಸಿರುವ ವೇತನಾನುದಾನವನ್ನು ಹಿಂಪಡೆಯಲಾಗಿರುವುದಾಗಿ ತಿಳಿಸಿ ವೇತನಾನುದಾನವನ್ನು ಬಿಡುಗಡೆಗೊಳಿಸಲು ಕೋರಿರುತ್ತಾರೆ. ಅದರಂತೆ ಸದರಿ ಸಂಸ್ಥೆಯಲ್ಲಿ ಆಗಸ್ಟ್-2018 ರಿಂದ ಅನುದಾನ ಸಂಹಿತೆಯ ನಿಯಮಾನುಸಾರ ಸಿಬ್ಬಂದಿಗಳು ತರಬೇತಿಗಳನ್ನು ನೀಡಿರುವ ಬಗ್ಗೆ ಪರಿವೀಕ್ಷಣೆ ನಡೆಸಿ ವರದಿ ನೀಡಲು ಜಂಟಿ ನಿರ್ದೇಶಕರು(ತ), ವಿಭಾಗೀಯ ಕಛೇರಿ, ಬೆಂಗಳೂರು ರವರಿಗೆ ದಿನಾಂಕ: 18-09-2019 ರ ಆಯುಕ್ತಾಲಯದ ಪತ್ರದಲ್ಲಿ ತಿಳಿಸಲಾಗಿತ್ತು.

ಜಂಟಿ ನಿರ್ದೇಶಕರು(ತ), ವಿಭಾಗೀಯ ಕಛೇರಿ, ಬೆಂಗಳೂರು ರವರು ಸದರಿ ಸಂಸ್ಥೆಯನ್ನು ಪರಿವೀಕ್ಷಣೆ ನಡೆಸಿ ಸದರಿ ಪರಿವೀಕ್ಷಣಾ ವರದಿಯಲ್ಲಿ ಸಂಸ್ಥೆಯಲ್ಲಿನ 14 ಸಿಬ್ಬಂದಿಗಳ ಪೈಕಿ 3 ಸಿಬ್ಬಂದಿಗಳು ಮಾತ್ರ ಆಗಸ್ಟ್-2018 ರಿಂದ ಅನುದಾನ ಸಂಹಿತೆಯ ನಿಯಮಾನುಸಾರ ಕರ್ತವ್ಯಗಳನ್ನು ನಿರ್ವಹಿಸಿರುವುದಾಗಿ ತಿಳಿಸಿ ದಿನಾಂಕ: 04-10-2019 ರ ಪತ್ರದಲ್ಲಿ ವರದಿ ಸಲ್ಲಿಸಿರುತ್ತಾರೆ.

1997 ರ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಅನುದಾನ ಸಂಹಿತೆಯಲ್ಲಿ Chapter-XI (II) ರ ಕಂಡಿಕೆ (1) ರ ಅನುಸಾರ "In case of gross mismanagement, deteriorations of standards of efficiency and discipliner or breach of instructions or orders issued by the Directorate or infringement of provisions of conditions, rules and procedures laid down in this code, which in the opinion of the Director is of a serious nature, the grant may be reduced or withdrawn by the Director after giving such an institution an opportunity of being heard." ಎಂದು ನಮೂದಿಸಲಾಗಿದೆ. ಆಡಳಿತ ಮಂಡಳಿಯವರು ಸಿಬ್ಬಂದಿಗಳು ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ತೃಪ್ತಿಕರವಾಗಿ ನಿರ್ವಹಿಸುತ್ತಿಲ್ಲವೆಂದು ತಿಳಿಸಿರುವುದರಿಂದ ವೇತನಾನುದಾನ ಪಾವತಿಸಲು ಅವಕಾಶಗಳಿರುವುದಿಲ್ಲ.

ಸಂಸ್ಥೆಯವರ ಸ್ಥಳವನ್ನು ಬಿ.ಎಂ.ಆರ್.ಸಿ.ಎಲ್. ರವರು ವಶಪಡಿಸಿಕೊಂಡಿರುವುದರಿಂದ ಸಂಸ್ಥೆಯವರ ಕೋರಿಕೆ ಮೇರೆಗೆ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ 43 ತರಬೇತಿದಾರರಿಗೆ ಡಿ.ಜಿ.ಟಿ. ನಿಯಮಾನುಸಾರ ತರಬೇತಿಗಳನ್ನು ಪೂರ್ಣಗೊಳಿಸಲು ಪರಸ್ಪರ ಆಡಳಿತ ಮಂಡಳಿಯವರ ಒಪ್ಪಿಗೆಯ ಮೇರೆಗೆ ದಿನಾಂಕ: 24-10-2019 ರ ಆಯುಕ್ತಾಲಯದ ಪತ್ರದಲ್ಲಿ ಗೌಸಿಯ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆ, ಹೊಸೂರು ರಸ್ತೆ, ಬೆಂಗಳೂರು ಇಲ್ಲಿಗೆ ತರಬೇತಿದಾರರನ್ನು ಮತ್ತು ಸದರಿ ತರಬೇತಿದಾರರಿಗೆ ತರಬೇತಿ ಪೂರ್ಣಗೊಳ್ಳುವವರೆಗೆ 03 ಅನುದಾನಿತ ಕಿರಿಯ ತರಬೇತಿ ಅಧಿಕಾರಿಗಳನ್ನು ನಿಯೋಜಿಸಲಾಗಿರುತ್ತದೆ.

ಆಯುಕ್ತಾಲಯದ ದಿನಾಂಕ: 27-02-2020ರ ಪತ್ರದಲ್ಲಿ ಜಂಟಿ ನಿರ್ದೇಶಕರು(ತ), ವಿಭಾಗೀಯ ಕಛೇರಿ, ಬೆಂಗಳೂರು ರವರ ಪರಿವೀಕ್ಷಣಾ ವರದಿಯಲ್ಲಿ ಶಿಫಾರಸ್ಸುಗೊಂಡ 03 ಅನುದಾನಿತ ಸಿಬ್ಬಂದಿಯವರಿಗೆ ಹಾಗೂ ಗೌಸಿಯ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆ, ಹೊಸೂರು ರಸ್ತೆ, ಬೆಂಗಳೂರು ಇಲ್ಲಿಗೆ ನಿಯೋಜಿಸಲಾದ 03 ಅನುದಾನಿತ ಸಿಬ್ಬಂದಿಯವರಿಗೆ ವೇತನಾನುದಾನ ಬಿಡುಗಡೆಗೊಳಿಸಲಾಗಿದೆ.

1997 ರ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಅನುದಾನ ಸಂಹಿತೆಯಲ್ಲಿ Chapter-VII(7) ಕಂಡಿಕೆ (6) ರಲ್ಲಿ "In all cases where the enrolment is less than 50% of the permitted intake prior approval of the Director shall be necessary to commence the concerned Trade or Unit" ಎಂದು ನಮೂದಿಸಿದೆ.

1997ರ ಅನುದಾನ ಸಂಹಿತೆಯನ್ವಯ ವೇತನಾನುದಾನವನ್ನು ಕೆಲವು ಷರತ್ತುಗಳಿಗೊಳಪಟ್ಟು ನೀಡಲಾಗುತ್ತಿದೆ. ಖಾಸಗಿ ಅನುದಾನಿತ ಸಂಸ್ಥೆಗಳು ಮುಚ್ಚಿದಲ್ಲಿ ಅನುದಾನಿತ ಸಿಬ್ಬಂದಿಗಳನ್ನು ಬೇರೆ ಅನುದಾನಿತ ಸಂಸ್ಥೆಗಳಿಗೆ ಅಥವಾ ಸರ್ಕಾರಿ ಸಂಸ್ಥೆಗಳಿಗೆ ವರ್ಗಾಯಿಸಲು ನಿಯಮಗಳಲ್ಲಿ ಅವಕಾಶಗಳಿರುವುದಿಲ್ಲ. ಶೇಕಡ 50 ಕ್ಕಿಂತ ಕಡಿಮೆ ಪ್ರವೇಶಾತಿ ಅಥವಾ ಪ್ರವೇಶಾತಿ ಇಲ್ಲದಿದ್ದಲ್ಲಿ ಅಂತಹ ವೃತ್ತಿ/ಘಟಕಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನಾನುದಾನವನ್ನು ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

* * * *

ಕೌಉಜೀಇ 30 ಕೃತಪ್ರ 2021

(ಡಾ.ಸಿ.ಎನ್.ಅಶ್ವಥ್ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು